# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 939 |
| ಸದಸ್ಯರ ಹೆಸರು | : | ಶ್ರೀ ಮುನಿರಾಜುಗೌಡ ಪಿ.ಎಂ. (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 13.07.2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಯವರು |

****

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ವಾಸಿಸುತ್ತಿರುವ ಮನೆಗಳ ಮಾಲೀಕರುಗಳು ಅವರವರ ಮನೆಗಳಲ್ಲಿ ಮಾಡಿಕೊಂಡಿರುವ ಒಳಚರಂಡಿಯು ದುರಸ್ಥಿಗೆ ಬಂದಾಗ ಅದನ್ನು ಸರಿಪಡಿಸಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರಿಗೆ ದೂರನ್ನು ಸಲ್ಲಿಸಿದಾಗ ಸದರಿಯವರು ಆ ಸ್ಥಳಕ್ಕೆ ಬಂದು ರಸ್ತೆಯಲ್ಲಿರುವ ಒಳಚರಂಡಿಯನ್ನು ಮಾತ್ರ ಸ್ವಚ್ಚಪಡಿಸುವುದಾಗಿ ಮತ್ತು ಕಾಂಪೌಡ್ ಒಳಗಿನ ಒಳಚರಂಡಿಯನ್ನು ಖಾಸಗಿಯವರಿಂದ ದುರಸ್ತಿ ಮಾಡಿಸಿಕೊಳ್ಳಲು ತಿಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಳವಡಿಸಿರುವ ವಿವಿಧ ಗಾತ್ರದ ಒಳಚರಂಡಿ ಕೊಳವೆಗಳು ಮತ್ತು ಮೆಷಿನ್‌ಹೋಲ್‌ಗಳಲ್ಲಿ ತ್ಯಾಜ್ಯ ನೀರು ಸರಾಗವಾಗಿ ಹರಿಯುವಂತೆ ಮಾಡುವ ಕಾರ್ಯ ಬೆಂಗಳೂರು ಜಲಮಂಡಳಿಯ ಹೊಣೆಯಾಗಿರುತ್ತದೆ.<br><br>ಪ್ರತಿನಿತ್ಯ ಬೆಂಗಳೂರು ಜಲಮಂಡಳಿಯು ಹಾಲಿ ಇರುವ 175 ಜಟ್ಟಿಂಗ್ ಯಂತ್ರಗಳು, 6 ಸೂಪರ್ ಸಕ್ಕರ್, 1 ರಿಸೈಕಲ್ ಯಂತ್ರಗಳು ಹಾಗೂ 58 ಡಿಸಿಲ್ಟಿಂಗ್ ಯಂತ್ರಗಳ ಮೂಲಕ ಒಳಚರಂಡಿ ಕೊಳವೆ ಮಾರ್ಗಗಳಲ್ಲಿ ತ್ಯಾಜ್ಯ ನೀರು ಸರಾಗವಾಗಿ ಹರಿಯಲು ಬೆಂಗಳೂರು ಜಲಮಂಡಳಿಯು ಕ್ರಮವಹಿಸುತ್ತದೆ.<br><br>ಕಟ್ಟಡದ ಕಾಂಪೌಂಡ್ ಒಳಗಡೆ ಇರುವ ಒಳಚರಂಡಿ ಕೊಳವೆ ಮಾರ್ಗವನ್ನು ದುರಸ್ಥಿ ಪಡಿಸುವುದು ಗ್ರಾಹಕರ ಜವಾಬ್ದಾರಿಯಾಗಿರುತ್ತದೆ. |
| ಆ) | ಸ್ವಂತ ಮನೆಯವರು ಖಾಸಗಿಯವರಿಂದ ಒಳಚರಂಡಿ ಸ್ವಚ್ಚತೆ ಕಾರ್ಯವನ್ನು ಮಾಡಿಸಿಕೊಂಡಲ್ಲಿ ಅವರು ಕೇಳಿದಷ್ಟು ಹಣವನ್ನು ನೀಡಬೇಕಾಗಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಸದರಿ ಕಾರ್ಯವನ್ನು ಸರ್ಕಾರದ ವತಿಯಿಂದ ಅಂದರೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರಿಂದಲೇ | ರಸ್ತೆಯಲ್ಲಿ ಅಳವಡಿಸಿರುವ ಕೊಳವೆ ಮಾರ್ಗ ಹಾಗೂ ಮೆಷಿನ್‌ಹೋಲ್‌ಗಳ ದುರಸ್ಥಿ ಕಾರ್ಯವನ್ನು ಬೆಂಗಳೂರು ಜಲಮಂಡಳಿಯಿಂದಲೇ ಮಾಡಲಾಗುತ್ತಿರುತ್ತದೆ, ಇವುಗಳನ್ನು ಯಾವುದೇ ಖಾಸಗಿ ರವರು ಬೆಂಗಳೂರು ಜಲಮಂಡಳಿಯ ಕೊಳವೆಗಳನ್ನು ಹಾಗೂ ಮೆಷಿನ್‌ಹೋಲ್‌ಗಳನ್ನು ದುರಸ್ಥಿ ಮಾಡುವಂತಿಲ್ಲ. ಕಟ್ಟಡದ ಸ್ಯಾನಿಟರಿ ಹೌಸ್ ಸರ್ವಿಸ್ ಕನೆಕ್ಷನ್ ಮತ್ತು ಕಾಂಪೌಂಡ್ ಒಳಗೆ ಇರುವ ಕೊಳವೆ ದುರಸ್ಥಿ ಕೆಲಸವನ್ನು "ಕಟ್ಟಡದ ಮಾಲೀಕರು" ಸನ್ನಿದ್ದು ಪಡೆದ ಬೆಂಗಳೂರು ಜಲಮಂಡಳಿಯ ಗುತ್ತಿಗೆದಾರರ ಮೂಲಕ ಸರಿಪಡಿಸಿಕೊಳ್ಳಬೇಕಾಗಿರುತ್ತದೆ. |

| | | |
|---|---|---|
| | ಒಳಚರಂಡಿ ಸ್ವಚ್ಛತೆ ಕಾರ್ಯವನ್ನು ಮಾಡಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ: | |
| ಇ) | ಸದರಿ ಒಳಚರಂಡಿ ಸ್ವಚ್ಛತೆ ಕಾರ್ಯಕ್ಕೆ ಗೃಹೋಪಯೋಗಿ ಮನೆಗಳು, ವಾಣಿಜ್ಯ ಮಳಿಗೆಗಳು ಮತ್ತು ಅಪಾರ್ಟ್‌ಮೆಂಟ್‌ಗಳವರಿಗೆ ಅಳತೆಗನುಸಾರವಾಗಿ ಸರ್ಕಾರವೇ ದರವನ್ನು ನಿಗಧಿಗೊಳಿಸಿ ಒಳಚರಂಡಿ ಮಂಡಳಿಯವರೇ ಹಣ ಪಡೆದು, ರಸೀದಿಯನ್ನು ನೀಡುವ ಮೂಲಕ ಬೆಂಗಳೂರು ನಗರವಾಸಿಗಳಿಗೆ ಒಳಚರಂಡಿ ಸ್ವಚ್ಛತೆ ಕಾರ್ಯವನ್ನು ಮಾಡಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ: (ವಿವರ ನೀಡುವುದು) | ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |
| ಈ) | ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಸರ್ಕಾರ ಸದರಿ ಕಾರ್ಯವನ್ನು ಪ್ರಾರಂಭಿಸಲಿದೆ? | ಅನ್ವಯಿಸುವುದಿಲ್ಲ. |

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ

**ಸಂಖ್ಯೆ: ನಅಇ 46 ಎಂಎಸ್‌ಐ 2023**